**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.88/2024**

**ಪಿಡಬ್ಲ್ಯೂ- 01(ಸಿಡಬ್ಲ್ಯೂ-01)**

ಸಾಕ್ಷಿದಾರರ ಹೆಸರು : ಸಂಗಮೇಶ ಮಠಪತಿ

ತಂದೆಯ ಹೆಸರು : ಸಿದ್ದಯ್ಯ

ವಯಸ್ಸು : **33** ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಇಂಡಿ, ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 02/06/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

1. ಚಾಸಾ-11 ನನ್ನ ತಂಗಿ. ಆರೋಪಿಯು ಆಕೆಯ ಗಂಡ. ಚಾಸಾ-12 ಆರೋಪಿ ಮತ್ತು ಚಾಸಾ-11 ರವರ ಮಗ. ನನ್ನ ತಂಗಿಯ ಮದುವೆ ಆರೋಪಿಯ ಜೊತೆ ಸುಮಾರು 10 ವರ್ಷಗಳ ಹಿಂದೆ ಆಗಿರುತ್ತದೆ. 2023 ರಲ್ಲಿ ನಾವು ಇಂಡಿಯ ಗಣೇಶ ನಗರದಲ್ಲಿ ವಾಸವಿದ್ದೇವು. ಆರೋಪಿ ಮತ್ತು ಚಾಸಾ-11 ರವರು ನಮ್ಮ ಮನೆಯಿಂದ ಸುಮಾರು 600 ಮೀಟರ್ ದೂರದಲ್ಲಿ ಚಾಸಾ-10 ರವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು.

2. ಮದುವೆ ಆದ ನಂತರ ನನ್ನ ತಂಗಿ ಆರೋಪಿಯ ಜೊತೆ ಚೆನ್ನಾಗಿ ಇದ್ದಳು. ಆರೋಪಿ ಮತ್ತು ನನ್ನ ತಂಗಿಯ ಮಧ್ಯೆ ಯಾವುದೇ ತಕರಾರು ಇರಲಿಲ್ಲ. ಸುಮಾರು ಎರಡು ವರ್ಷಗಳ ಹಿಂದೆ ಆರೋಪಿ ಮತ್ತು ನನ್ನ ತಂಗಿ ಗಲಾಟೆ ಮಾಡಿಕೊಂಡಿರುತ್ತಾರೆ. ಆರೋಪಿಯು ನನ್ನ ತಂಗಿ ಚಾಸಾ-11 ರವರಿಗೆ ಸಂಜೆ ಸುಮಾರು 7.00 ಗಂಟೆಗೆ ಚಾಕುವಿನಿಂದ ಕತ್ತಿಗೆ ಹೊಡೆದಿದ್ದ. ಈ ಘಟನೆ ಬಗ್ಗೆ ನನಗೆ ಮನೆಯ ಮಾಲೀಕರು ದೂರವಾಣಿ ಕರೆ ಮಾಡಿ ತಿಳಿಸಿದರು. ನಾನು ರಾತ್ರಿ 8.00 ಗಂಟೆಗೆ ಚಾಸಾ-11 ರವರ

ಮನೆಯ ಬಳಿ ಹೋಗಿ ಆಕೆಯನ್ನು ಇಂಡಿಯ ಸಂತೋಷ ಪಾಟೀಲ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದೆ. ನಾನು ನನ್ನ ತಂಗಿಯ ಮನೆಗೆ ಹೋದಾಗ ಪ್ರಜ್ಞಾಹೀನಳಾಗಿ ಮನೆಯ ಹಾಲ್ ನಲ್ಲಿ ಬಿದ್ದಿದ್ದಳು. ಆರೋಪಿಯು ಮನೆಯಲ್ಲಿ ಇರಲಿಲ್ಲ. ಬಿದ್ದ ಸ್ಥಳದಲ್ಲಿ ರಕ್ತ ಚೆಲ್ಲಿತ್ತು. ನಾನು ತಕ್ಷಣ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-12 ಸಹ ಮನೆಯಲ್ಲಿ ಇರಲಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಮರುದಿನ ದೂರು ನೀಡಿರುತ್ತೇನೆ. ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ.1 ನನ್ನ ಹಸ್ತಾಕ್ಷರದಲ್ಲಿ ಇರುತ್ತದೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಈಗ ಸರಿಯಾಗಿ ನೆನಪಿಲ್ಲ. ಆರೋಪಿಯು ಯಾವ ಕಾರಣಕ್ಕೆ ನನ್ನ ತಂಗಿಗೆ ಹೊಡೆದಿರುತ್ತಾನೆ ಎಂದು ನನಗೆ ಗೊತ್ತಿಲ್ಲ.

3. ನಂತರ ದಿ:05.06.2023 ರಂದು ಸಂಜೆ 5.00 ಗಂಟೆಗೆ ಘಟನೆ ನಡೆದ ಸ್ಥಳಕ್ಕೆ ಬಂದಿದ್ದು, ನಾನು ಪೋಲಿಸರಿಗೆ ಘಟನೆ ನಡೆದ ಸ್ಥಳವನ್ನು ತೋರಿಸಿರುತ್ತೇನೆ. ಆ ಸಮಯದಲ್ಲಿ ಪೋಲಿಸರು ಸ್ಥಳ ಪಂಚನಾಮೆಯನ್ನು ಮಾಡಿ, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರು ಪೋಟೋಗಳನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಯು 06 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.3, ನಿ.ಪಿ.3(1) ರಿಂದ 3(5) ಎಂದು

ಗುರುತಿಸಲಾಯಿತು. ಪೋಲಿಸರು ಆ ಸಮಯದಲ್ಲಿ ಸ್ಥಳದಲ್ಲಿ ಬಿದ್ದಿದ್ದ ಒಂದು ಬ್ಲೇಡನ್ನು ಅಮಾನತ ಪಡೆಸಿಕೊಂಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ಮೊಹರು ಮಾಡಿದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದು, ಮೊಹರು ಸುಸ್ಥಿತಿಯಲ್ಲಿ ಇದ್ದು, ಅದನ್ನು ತೆರೆಯಲು ಅನುಮತಿಸಲಾಯಿತು). ಸಾಕ್ಷಿಯು ಅದರೊಳಗಡೆ ಇರುವ ಒಂದು ಸರ್ಜಿಕಲ್ ಬ್ಲೇಡನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸ್ಥಳದಿಂದ ಬಿದ್ದಿದ್ದ ರಕ್ತವನ್ನು ತನಿಖಾಧಿಕಾರಿಗಳು ಸಂಗ್ರಹಿಸಿಕೊಂಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ಮೊಹರು ಮಾಡಿದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದು, ಮೊಹರು ಸುಸ್ಥಿತಿಯಲ್ಲಿ ಇದ್ದು, ಅದನ್ನು ತೆರೆಯಲು ಅನುಮತಿಸಲಾಯಿತು). ಸಾಕ್ಷಿಯು ಅದರೊಳಗಡೆ ಇರುವ ರಕ್ತ ಸಂಗ್ರಹಿಸಲು ಉಪಯೋಗಿಸಿದ ರಕ್ತದ ಕಲೆಗಳಿರುವ ಹತ್ತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

4. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿ.ಪಿ.1 ನ್ನು ನಾನೇ ಬರೆದು ಕೊಟ್ಟಿರುತ್ತೇನೆ ಎಂದರೆ ಸರಿ.

5. ಆರೋಪಿ ಮತ್ತು ಚಾಸಾ-11 ರವರು ಮದುವೆ ಆದ ನಂತರ ಮಹಾರಾಷ್ಟ್ರದ ಪುಣೆ ಜಿಲ್ಲೆಯ ಮಾವಳಿ ತಾಲೂಕಿನ ದಾಂಬಡಿ ಗ್ರಾಮದ ಯಶವಂತ ಓಣಿಯ ಬಾಲಾಜಿ ದೇವಸ್ಥಾನದ ಬಳಿ ಇದ್ದ ಅವರ ಮನೆಯಲ್ಲಿ ವಾಸವಿರುತ್ತಿದ್ದರು ಎಂದರೆ ಸರಿ. ಘಟನೆ ನಡೆಯುವ ಒಂದು ವರ್ಷದ ಹಿಂದೆ ಆರೋಪಿ ಮತ್ತು ಚಾಸಾ-11 ರವರು ಇಂಡಿಗೆ ಬಂದು ನಮ್ಮ ಮನೆಯ ಹತ್ತಿರ ಬಾಡಿಗೆ ಮನೆಯಲ್ಲಿ ವಾಸವಿರಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ಆರೋಪಿಯು ನಂತರ ನನ್ನ ಜೊತೆ ನನ್ನ ಬ್ಯಾಟರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಆರೋಪಿಯು ನನ್ನ ತಂಗಿ ಬೇರೆ ಗಂಡಸರ ಜೊತೆ ಮಾತನಾಡುತ್ತಾಳೆ ಮತ್ತು ಆಕೆಗೆ ಬೇರೆ ಗಂಡಸರ ಜೊತೆ ಸಂಬಂಧ ಇದೆ ಎಂದು ಸಂಶಯ ಪಟ್ಟು ಆಕೆಯ ಜೊತೆ ಗಲಾಟೆ ಮಾಡುತ್ತಿದ್ದ ಎಂದು ಬರೆದಿರುತ್ತೇನೆ ಎಂದರೆ ಸರಿ. ಈ ವಿಚಾರವನ್ನು ನನ್ನ ತಂಗಿ ನನಗೆ ಹೇಳಿದ್ದಳು ಎಂದರೆ ಸರಿ. ನಂತರ ನಾವು, ಆರೋಪಿ, ಚಾಸಾ-11 ಮತ್ತು ಅವರ ಮಕ್ಕಳನ್ನು ನಮ್ಮ ಮನೆಯಲ್ಲಿ ಇರಿಸಿಕೊಂಡಿದ್ದೇವು ಎಂದರೆ ಸರಿ. ದಿ: 01.06.2023 ರಂದು ಚಾಸಾ-11 ರವರು ನಮ್ಮ ಮನೆಯಿಂದ ಆರೋಪಿಯ ಜೊತೆ ಘಟನೆ ನಡೆದ ಬಾಡಿಗೆ ಮನೆಗೆ ಹೋಗಿರುತ್ತಾರೆ ಎಂದರೆ ಸರಿ.

6. ದಿ: 04.06.2023 ರಂದು ನಾನು ಮತ್ತು ನಮ್ಮ ತಂದೆ ತಾಯಿ ಮನೆಯಲ್ಲಿದ್ದಾಗ ರಾತ್ರಿ 10.15 ಗಂಟೆಗೆ ನನ್ನ ತಂಗಿಯ ಮಗಳು ಆರಾಧ್ಯಾ ನಮ್ಮ ಮನೆಗೆ ಬಂದು ಅಪ್ಪ ಅಮ್ಮನಿಗೆ ಹೊಡೆದಿರುತ್ತಾರೆ ಎಂದು ತಿಳಿಸಿರುತ್ತಾಳೆ ಎಂದರೆ, ಸಾಕ್ಷಿಯು ನಮ್ಮ ಮನೆಯಲ್ಲಿ ಬಂದು ಹೇಳಿರುತ್ತಾಳೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಸಹ

ಮನೆಯಲ್ಲಿ ಇದ್ದೆ ಎಂದರೆ ಸರಿ. ನಂತರ ನಾನು, ಮತ್ತು ನಮ್ಮ ತಂದೆ ತಾಯಿ ಎಲ್ಲರೂ ಆಕೆಯ ಮನೆಗ ಹೋದೆವು ಎಂದರೆ ಸರಿ. ಆರೋಪಿಯು ನಮ್ಮ ತಂಗಿಗೆ ಅನೈತಿಕ ಸಂಬಂಧ ಇದೆ ಎಂದು ಸಂಶಯ ಪಟ್ಟು ಆಕೆಗೆ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲು:- ಶ್ರೀ. ಎಸ್.ಆರ್.ಕೆ., ವಕೀಲರಿಂದ ಆರೋಪಿತನ ಪರಃ**

(ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿಯನ್ನು ವಿಚಾರಿಸಲಾಗಿ ಬೇರೆ ವಕೀಲರನ್ನು ನೇಮಿಸಲು ಕಾಲಾವಕಾಶ ಕೋರಿದ್ದು, ಕಾನೂನು ಸೇವಾ ಪ್ರಾಧಿಕಾರದಿಂದ ಕೊಡಮಾಡುವ ಕಾನೂನು ಸಹಾಯವನ್ನು ನಿರಾಕರಿಸಿರುತ್ತಾನೆ. ಆ ಕಾರಣ ರೂ.500/- ಖರ್ಚು ನೀಡುವ ಷರತ್ತಿನೊಂದಿಗೆ ಕಾಲಾವಕಾಶ ನೀಡಲಾಯಿತು).

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.